(ಇಂದು ದಿಃ 28-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ವಾಟೀ ಸವಾಲು :- ಶ್ರೀ.SKD ವಕೀಲರಿಂದ :-**

ಸಾಕ್ಷಿಗೆ ದಾವಾ ಸೆಡ್ಯೂಲನ್ನು ಓದಿ ಹೇಳಿದಾಗ ನನಗೆ ಎಲ್ಲಾ ಆಸ್ತಿಗಳ ಬಗ್ಗೆ ಗೊತ್ತು ಎಂದು ಹೇಳಿರುತ್ತಾರೆ. ನನ್ನ ತಂದೆಯ ತಂದೆ ಭೀಮಣ್ಣ. ಭೀಮಣ್ಣನ ತಂದೆ ರಾಮಣ್ಣ. ದಾವಾ ಸ್ವತ್ತುಗಳು ರಾಮಣ್ಣನಿಂದ ಬಂದ ಸ್ವತ್ತುಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಕಡೆಯಿಂದ ಬಂದ ಸ್ವತ್ತುಗಳು ಎಂದು ಹೇಳುತ್ತಾರೆ. ನನಗೆ ಇಬ್ಬರು ಹೆಂಡತಿಯರು ಮೊದಲನೆಯವಳು ಭೀಮವ್ವ. 2ನೇ ಹೆಂಡತಿ ಮಹಾದೇವಮ್ಮ. ಭೀಮವ್ವ ಇನ್ನೂ ಬದುಕಿದ್ದಾಳೆ.

ಭೀಮವ್ವಳ ಮಗ ಸಿದ್ದಪ್ಪ ಎಂದರೆ ಸರಿ. ಸಿದ್ದಪ್ಪನ ಹೆಂಡತಿ ಸಂಗೀತಾ ಎಂದರೆ ಸರಿ. ಸಿದ್ದಪ್ಪ ಮತ್ತು ಸಂಗೀತಾ ಮದುವೆ ಆಗಿ 4 ವರ್ಷ ಆಗಿದೆ. ಅವರ ದಾಂಪತ್ಯದಿಂದ ಮೊದಲನೆ ವಾದಿ ಜನಿಸಿದ್ದಾಳೆ ಎಂದರೆ ಸರಿ. ನಾನು ಮಾಹಾದೇವಮ್ಮ ಮತ್ತು ಅವರ ಮಕ್ಕಳ ಜೊತೆ ಬೇರೆ ವಾಸ ಇದ್ದೇನೆ ಎಂದರೆ ಸರಿ. ಭೀಮವ್ವ ಮತ್ತು ಸಿದ್ದಪ್ಪನನ್ನು ನಾನು ಮನೆಯಿಂದ ಹೊರ ಹಾಕಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಭೀಮವ್ವಳಿಗೆ ಹೊಸ ಮನೆ ಕಟ್ಟಿಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಗೌರಮ್ಮ ಗಾಣಿಗೇರಿಂದ ಜಾಗ ಖರೀದಿ ಮಾಡಿ ಮನೆ ಕಟ್ಟಿಕೊಟ್ಟಿದ್ದೇನೆ. ಸದರಿ ಜಾಗದ ಖರೀದಿ ಪತ್ರ ಸಿದ್ದಪ್ಪನ ಹೆಸರಿಗೆ ಆಗಿದೆ. ಭೀಮವ್ವಳಿಗೆ ಈಗ ವಯಸ್ಸಾಗಿದೆ ಎಂದರೆ ಸರಿ. ಸಂಗೀತಾ ಚಿಕ್ಕವಳಿದ್ದು ಕಾರಣ ವಾದಿಯರಿಗೆ ಆದಾಯ ಇಲ್ಲ ಎಂದರೆ ಸರಿ. ನಾನು 2ನೇ ಹೆಂಡತಿ ಮತ್ತು ಅವರ ಮಕ್ಕಳು ಮಾತು ಕೇಳಿಕೊಂಡು ವಾದಿಯರಿಗೆ ಊಟಾ ಬಟ್ಟೆಗೆ ಮತ್ತು ವಿದ್ಯಾ ಭ್ಯಾಸಕ್ಕೆ ಯಾವುದೇ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಜೋಳ, ತೊಗರಿ, ಬೆಳೆ, ಕೊಟ್ಟಿದ್ದೇನೆ. ನಾನು ಅವರಿಗೆ ಯಾವುದೇ ಆಹಾರ ಧಾನ್ಯಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು 2ನೇ ಹೆಂಡತಿ ಮಕ್ಕಳ ಮಾತು ಕೇಳಿಕೊಂಡು ದಾವಾ ಐಟಂ ನಂಬರ 1 ರಿಂದ 3 ಸ್ವತ್ತುಗಳನ್ನು 7 ರಿಂದ 10ನೇ ಪ್ರತಿವಾದಿಗಳಿಗೆ ಎಕರೆಗೆ 20,00,000/- ರೂಪಾಯಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಾಲ ಆಗಿತ್ತು ಕಾರಣ ಸಾಲ ತೀರಿಸಲು ಮಾರಾಟ ಮಾಡಿದ್ದೆ ಎಂದು ಹೇಳುತ್ತಾರೆ. ನಾನು ಯಾರಿಂದ ಸಾಲ ಪಡೆದುಕೊಂಡಿದ್ದೆ ಮತ್ತು ಎಷ್ಟು ಸಾಲ ಇತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೇನೆ. ನಿಪಿ-28 ರಿಂದ 33 ದಾಖಲಾತಿಗಳನ್ನು ಈ ದಾವೆಯಲ್ಲಿ ಅನುಕೂಲ ಆಗಲಿ ಎಂದು ಸುಳ್ಳು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಕುಟುಂಬದ ಅವಶ್ಯಕತೆಗಾಗಿ ನಾನು ಯಾವತ್ತು ಯಾರ ಬಳಿವು ಸಾಲ ಮಾಡಿಲ್ಲ ಎಂದರೆ ಸರಿಯಲ್ಲ.

ದಾವಾ ಜಮೀನುಗಳು ನಮ್ಮ ಕುಟುಂಬಂದ ಪಿತ್ರಾರ್ಜಿತ ಜಮೀನುಗಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಯ ತಾಯಿ ಕಡೆಯಿಂದ ಬಂದ ಜಮೀನುಗಳು ಎಂದು ಹೇಳುತ್ತಾರೆ. ಭೀಮವ್ವಳಿಗೆ ಅವಳ ಗಂಡ ತೀರಿಹೋದನಂತರ ಜಮೀನು ಬಂದಿದ್ದವು.

ನಾನು ಭೀಮವ್ವಳಿಗೆ ದತ್ತಕ ಹೋಗಿರಲಿಲ್ಲ. ಇತ್ತಿಚೇಗೆ ಎಲ್ಲಾ ವಸ್ತುಗಳ ಬೆಲೆ ಹೆಚ್ಚಾಗಿದೆ ಎಂದರೆ ಸರಿ. ನಾನು ಕುಟುಂಬದ ಜಮೀನುಗಳನ್ನು ಮಾರಾಟ ಮಾಡಿ ಅದೇ ಹಣದಿಂದ 2ನೇ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಜಮೀನುಗಳನ್ನು ಕೊಂಡುಕೊಂಡಿದ್ದೇನೆ ಎಂದರೆ ಸರಿಯಲ್ಲ. ಅದೇರೀತಿ ಜಮೀನುಗಳನ್ನು ಮಾರಾಟ ಮಾಡಿದ ಹಣವನ್ನು ಕೂಡ ನನ್ನ 2ನೇ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಬ್ಯಾಂಕನಲ್ಲಿ ಠೇವಣಿ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು 2ನೇ ಹೆಂಡತಿ ಮತ್ತು ಮಕ್ಕಳ ಮಾತುಕೇಳಿಕೊಂಡು ವಾದಿಯರಿಗೆ ಯಾವುದೇ ಹಣ ಮತ್ತು ಜೀವನಾಂಶ ಕೊಟ್ಟಿಲ್ಲ ಎಂದರೆ ಸರಿಯಲ್ಲ. 2ನೇ ಹೆಂಡತಿ, ಅವರ ಮಕ್ಕಳು, ಮೊದಲನೆ ಹೆಂಡತಿ, ಅವರ ಮಕ್ಕಳು ಎಲ್ಲರನ್ನು ನೋಡಿಕೊಳ್ಳುವ ಜವಬ್ದಾರಿ ನನ್ನದು ಎಂದರೆ ಸರಿ. 2ನೇ ಹೆಂಡತಿ ಮಕ್ಕಳನ್ನು ನೋಡಿದಂತೆ ನಾನು ಮೊದಲನೆ ಹೆಂಡತಿ ಮಕ್ಕಳನ್ನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ. 2ನೇ ವಾದಿಯ ಸೋದರತ್ತೆಯನ್ನು ನನಗೆ ಮದುವೆ ಮಾಡಿಕೊಟ್ಟಿದ್ದರು ಅವಳೇ ಭೀಮವ್ವ. ಸಿದ್ದಪ್ಪನ ಮದುವೆ ಆಗುವಾಗ 2ನೇ ವಾದಿ ಮನೆಯವರಿಗೆ ಜಮೀನುಗಳ ಬಗ್ಗೆ ಹೇಳಿ ಸೊಸೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದು ಹೇಳಿ ಮದುವೆ ಮಾಡಿದ್ದೆವು ಎಂದರೆ ಸರಿ. ದಾವಾ ಜಮೀನುಗುಳ ವಾದಿಯರ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಜಮೀನುಗಳು ಎಂದರೆ ಸರಿ. ದಾವಾ ಜಮೀನುಗಳಲ್ಲಿ ವಾದಿಯರಿಗೂ ಹಕ್ಕು ಇದೆ ಎಂದರೆ ಸರಿ. ನಾನು ಈಗಾಲೆ ದಾವಾ ಐಟಂ ನಂಬರ 1 ರಿಂದ 3ನ್ನು ಮಾರಾಟ ಮಡಿದ್ದು ವಾದಿಯರು ಈ ದಾವೆ ಹಾಕುವ ಕಾಲಕ್ಕೆ ಇನ್ನೂ ಉಳಿದ 2 ಜಮೀನುಗಳನ್ನು ಮಾರಾಟ ಮಾಡಲು ಹೋರಟ್ಟಿದ್ದೆ ಎಂದರೆ ಸರಿ. ವಾದಿಯರಿಗೆ ಊಟಾ ಬಟ್ರೆಗೆ ಯಾವುದೇ ಜಮೀನು ಇಲ್ಲ ಎಂದರೆ ಸರಿ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಇರುವ ಭಾಗಾಂಶದ ಹಕ್ಕನ್ನು ತಪ್ಪಿ ಸುವ ಸಲುವಾಗಿ 2ನೇ ಹೆಂಡತಿ ಮಕ್ಕಳ ಮಾತು ಕೇಳಿಕೊಂಡು ಈಗಾಲೆ ದಾವಾ ಐಟಂ ನಂಬರ 1 ರಿಂದ 3ನ್ನು ಮಾರಾಟ ಮಾಡಿದ್ದು ಈಗ ಉಳಿದ 2 ಜಮೀನುಗಳಲ್ಲಿ ವಾದಿಯರಿಗೆ ಭಾಗ ಕೊಡಬಾರದು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯರಿಗೆ ತಿಂಗಳಿಗೆ ಕನಿಷ್ಠ ತಾಲ 8000/- ಜೀವನ ಸಾಗಿಸಲು ಹಣ ಬೇಕು ಎಂದರೆ

ಸರಿಯಲ್ಲ. ನನಗೆ ದಾವಾ ಜಮೀನುಗಳಿಂದ ವರ್ಷಕ್ಕೆ ರೂ. 10 ರಿಂದ 15 ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಫಲವತ್ತಾದ ಜಮೀನುಗಳು ಎಂದರೆ ಸರಿಯಲ್ಲ.

**ವಾಟೀ ಸವಾಲು :- 9 ಮತ್ತು 10 ನೇ ಪ್ರತಿವಾದಿ ಪರ ಶ್ರೀ.SBM ವಕೀಲರಿಂದ :-**

ನನ್ನ ಮಗ ಸಿದ್ದಪ್ಪನ ಮದುವೆ ನಾನೇ ಮಾಡಿದ್ದೇನೆ ಎಂದರೆ ಸರಿ. ಮದುವೆ ನಂತರ ನನ್ನ ಮಗ ಮದ್ಯಪಾನ ಮಾಡಲು ಶುರು ಮಾಡಿದ ಎಂದರೆ ಸರಿ. ಕುಡಿತದಿಂದಾಗಿ ಆತನ ಆರೋಗ್ಯ ಹಾಳಾಗಿ ಲಿವರ ಸಮಸ್ಯೆ ಆಗಿತ್ತು ಎಂದರೆ ಸರಿ. ಸದರಿ ಚಿಕಿತ್ಸೆಗೆ ವೈದ್ಯಕೀಯ ವೆಚ್ಚವನ್ನು ನಾನೇ ಭರಿಸಿದ್ದೇನೆ ಎಂದರೆ ಸರಿ. ಸಾಕಷ್ಟು ಹಣ ಖರ್ಚು ಮಾಡಿದರು 3 ವರ್ಷಗಳ ಹಿಂದೆ ನನ್ನ ಮಗ ತೀರಿಹೋದ ಎಂದರೆ ಸರಿ. ಸರ್ವೆ ನಂಬರ 731/1 4 ಎಕರೆ 33 ಗುಂಟೆ ನನ್ನ ತಾಯಿ ತಾಯಿ ಕಡೆಯಿಂದ ಬಂದ ಜಮೀನು ಎಂದರೆ ಸರಿ. ನಾನು ಕುಟುಂಬದ ಸಾಲ ತೀರಿಸುವ ಸಲುವಾಗಿ ಮೇಲಿನ ಜಮೀನನ್ನು 9 ಮತ್ತು 10ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಮಾರಾಟ ಮಾಡುವಾಗ ವಾದಿಯರು ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಕೇಳಿ ಮಾರಾಟ ಮಾಡಿದ್ದೇನೆ. ನನ್ನ ಮಗ ತೀರಿಹೋದ 2 ತಿಂಗಳಿಗೆ ಸದರಿ ಜಮೀನು ಮಾರಾಟ ಮಾಡಿದ್ದೇವೆ. ಜಮೀನು ಖರೀದಿ ಮಾಡಿದಾಗಿನಿಂದ 9 ಮತ್ತು 10ನೇಪ್ರತಿವಾದಿಯರ ಸದರಿ ಜಮೀನಿನಲ್ಲಿ ಕಬ್ಜಾದರರಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**